ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೭**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೈದನೇ ಅಧಿವೇಶನ**

**ಗುರುವಾರ, ದಿನಾಂಕ: ೧೩ನೇ ಮಾರ್ಚ್, ೨೦೨೫**

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಉಪ ಮುಖ್ಯಮಂತ್ರಿಗಳು

೩. ಗೃಹ ಸಚಿವರು

೪. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

೫. ಅಬಕಾರಿ ಸಚಿವರು

೬. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

---

## ರಾಜ್ಯದ ಖಜಾನೆ–೨ ರಲ್ಲಿನ ದೋಷಗಳ ಕುರಿತು

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೧ (೮೫೨) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಖಜಾನೆ–೨ ಸಾಫ್ಟ್‌ವೇರ್ ಅಳವಡಿಕೆ ಮಾಡಿದ ಮೇಲೆ ಖಜಾನೆ ಇಲಾಖೆಯು ಸಾರ್ವಜನಿಕರು/ನೌಕರರಿಗೆ ಮತ್ತು ಇತರೆ ವ್ಯಕ್ತಿಗಳಿಗೆ ನೀಡಲಾದ ಮೊತ್ತವೆಷ್ಟು ; (ವಿವರ ನೀಡುವುದು)

(ಆ) ಅರ್ಹ ಫಲಾನುಭವಿಗಳಿಗೆ ಒಂದು ಬಾರಿಗೆ ಹಣ ಪಾವತಿಸುವ ಬದಲಿಗೆ ಎರಡು–ಮೂರು ಬಾರಿ ಪಾವತಿಸಿರುವ ಪ್ರಕರಣಗಳೆಷ್ಟು ; (ವಿವರ ಒದಗಿಸುವುದು)

(ಇ) ಅರ್ಹರಲ್ಲದ ಫಲಾನುಭವಿಗಳಿಗೆ ಹಣ ಪಾವತಿಸಲಾಗಿದೆಯೇ ; (ವಿವರ ನೀಡುವುದು)

(ಈ) ಇಂತಹ ಪ್ರಕರಣಗಳಲ್ಲಿ ವಸೂಲಾತಿ ಆಗದಿರುವ ಮೊತ್ತವೆಷ್ಟು ; (ವಿವರ ನೀಡುವುದು)

(ಉ) ಆರ್ಥಿಕ ಇಲಾಖೆಯು ಆರ್ಥಿಕ ನಿಯಮಕ್ಕೆ ವಿರುದ್ಧವಾಗಿ ಉಪ–ವೋಚರ್‌ಗಳಿಲ್ಲದೆ ಇಲಾಖೆಯ ಸಾದಿಲ್ವಾರ್ ಬಿಲ್ಲುಗಳನ್ನು ಖಜಾನೆ ಇಲಾಖೆಯು ಪಾಸು ಮಾಡಲು ಸೂಚನೆ ನೀಡಿದೆ ; ಹಾಗೂ ಎಷ್ಟು ಮೊತ್ತದ ಬಿಲ್ಲುಗಳನ್ನು ಪಾಸು ಮಾಡಲಾಗಿದೆ ? (ವಿವರ ನೀಡುವುದು)

## ಬೆಂಗಳೂರು ನಗರದಲ್ಲಿರುವ ಪಬ್‌ಗಳ ಕುರಿತು

**ಶ್ರೀ ಎಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೨ (೮೫೧) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಪಬ್‌ಗಳನ್ನು ತರೆಯಲು ಇರುವ ಮಾನದಂಡಗಳೇನು ; ಬೆಂಗಳೂರು ನಗರದಲ್ಲಿ ಪರವಾನಗಿ ಪಡೆದು ನಡೆಯುತ್ತಿರುವ ಪಬ್‌ಗಳ ಸಂಖ್ಯೆಯೆಷ್ಟು ; ಅನಧಿಕೃತವಾಗಿ ಪಬ್‌ಗಳನ್ನು ನಡೆಸುತ್ತಿರುವವರ ಮೇಲೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ ; (ಪಬ್‌ಗಳ ಸಮೇತ ಸಂಪೂರ್ಣ ಮಾಹಿತಿ ನೀಡುವುದು)

(ಆ) ಅನಧಿಕೃತವಾಗಿ ಪಬ್‌ಗಳು ನಡೆಸುತ್ತಿದ್ದರೂ ಕೂಡ ಪೊಲೀಸ್ ಇಲಾಖೆಯಿಂದ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಯಾವುದೇ ಕಠಿಣ ಕ್ರಮ ಕೈಗೊಳ್ಳದಿರಲು ಕಾರಣವೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಪಬ್‌ಗಳನ್ನು ತೆರೆಯಲು ಮತ್ತು ಮುಚ್ಚಲು ಸರ್ಕಾರದಿಂದ ಸಮಯ ನಿಗಡಿಪಡಿಸಿದೆಯೇ ; ಇಲ್ಲದಿದ್ದಲ್ಲಿ, ಅವಧಿ ಮೀರಿ ನಡೆಸುತ್ತಿರುವವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತಿದೆ ;

(ಈ) ಅವಧಿ ಮೀರಿ ಪಬ್‌ಗಳನ್ನು ನಡೆಸುತ್ತಿರುವುದರಿಂದ ನಗರದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುತ್ತಿರುವುದಾಗಿ ಗೃಹ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ತಿಳಿಸಿದ್ದು, ಈ ಎರಡೂ ಇಲಾಖೆಗಳು ಸೇರಿ ಅವಧಿ ಮೀರಿ ನಡೆಸುತ್ತಿರುವ ಪಬ್‌ಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲು ಮುಂದಾಗುವುದೇ ? (ಸಂಪೂರ್ಣ ಮಾಹಿತಿ ನೀಡುವುದು)

## ಕರ್ನಾಟಕ ರಾಜ್ಯದ ಪೋಲಿಸ್ ವ್ಯವಸ್ಥೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೩ (೮೩೫) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬದಲಾಗುತ್ತಿರುವ ಸನ್ನಿವೇಶದಲ್ಲಿ ಹೆಚ್ಚುತ್ತಿರುವ ಅಪರಾಧ ಚಟುವಟಿಕೆಗಳು, ಸುರಕ್ಷತೆ ಮತ್ತು ಕಾನೂನು ಸುವ್ಯವಸ್ಥೆ ಒದಗಿಸಲು ಅಗತ್ಯವಿರುವ ಸರ್ಕಾರ ನಿಗದಿಪಡಿಸಿದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ (population police ratio) ದಾಮಾಶಯ ಎಷ್ಟು ; ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ ;

(ಆ) ಪ್ರಸ್ತುತ ಪೊಲೀಸ್ ಸಿಬ್ಬಂದಿಗಳಿಗೆ ವಿಶ್ರಾಂತಿ ರಹಿತವಾಗಿ ಮತ್ತು ೮.೦೦ ಗಂಟೆಗಳಿಗಿಂತ ಹೆಚ್ಚು ಕಾರ್ಯನಿರ್ವಹಿಸುವ ಸನ್ನಿವೇಶ ಉದ್ಭವಿಸುತ್ತದೆಯೇ ; ಇಲಾಖೆಯಲ್ಲಿ ಡ್ಯೂಟಿ ರೊಟೇಷನ್ ಮಾಡಲಾಗುತ್ತಿದೆಯೇ ; (ಡ್ಯೂಟಿ ಪಾಯಿಂಟ್‌ಗಳು, ಸಿಬ್ಬಂದಿಗಳ ಸಂಖ್ಯೆ ಮತ್ತು ಡಬಲ್ ಡ್ಯೂಟಿ ಮಾಡುವ ಸಿಬ್ಬಂದಿಗಳ ಅಂಕಿ ಅಂಶ ಸಹಿತ ವಿವರ ನೀಡುವುದು)

(ಇ) ರಾಜ್ಯದಲ್ಲಿ ಸಂಚಾರಿ ಪೊಲೀಸ್ ಅಧಿಕಾರಿಗಳಿಗೆ ಖಾಸಗಿ ವಾಹನಗಳನ್ನು ತಪಾಸಣೆ ಮಾಡುವ ಬಗ್ಗೆ body camera ಧರಿಸುವ ಸಹಿತ ಮಾರ್ಗಸೂಚಿಗಳು ಇವೆಯೇ ; ಹೆಚ್ಚಿನ ಸಂದರ್ಭಗಳಲ್ಲಿ ಪೊಲೀಸ್ ಅಧಿಕಾರಿಗಳ ಅಪಾಯಕಾರಿ ಮತ್ತು ಅಗಲ ಕಿರಿದಾದ ಹೆಚ್ಚು ವಾಹನ ಸಂಚಾರವಿರುವ ಸ್ಥಳಗಳಲ್ಲಿ ವಾಹನಗಳನ್ನು ತಪಾಸಣೆ ಮಾಡಿ ಸಂಚಾರಕ್ಕೆ ತೊಂದರೆ ಮಾಡುವ ಬಗ್ಗೆ ಸರ್ಕಾರವು ಏನು ಕ್ರಮವಹಿಸುತ್ತಿದೆ ;

(ಈ) ನಾಗರಿಕ ಭೂಸಂಬಂಧಿತ ಪ್ರಕರಣಗಳಲ್ಲಿ ಪೊಲೀಸರು ಮಧ್ಯಪ್ರವೇಶಿಸಬಾರದೆಂಬ ಸುತ್ತೋಲೆಯಿದ್ದರೂ ಪೋಲೀಸರು ಪರಿಶೀಲನೆ ನೆಪದಲ್ಲಿ ಸ್ಥಳಕ್ಕೆ ಸಂದರ್ಶಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಪೊಲೀಸ್ ಇಲಾಖೆಯಿಂದ ಸಂಚಾರ ನಿಯಮಗಳನ್ನು ಉಲ್ಲಂಘಿಸದ ಮತ್ತು ನೋಟಿಸ್‌ನಲ್ಲಿ ಉಲ್ಲೇಖಿಸಿದ ಸ್ಥಳಗಳಿಗೆ ಹೋಗಿಯೇ ಇಲ್ಲದ ವಾಹನಗಳ ಮಾಲೀಕರಿಗೆ ದಂಡನಾ ನೋಟಿಸ್ ಜಾರಿಯಾಗಲು ಕಾರಣವೇನು ; ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಿಯಮ ಉಲ್ಲಂಘಿಸಿದ ವಾಹನ ತಮ್ಮದಲ್ಲ ಎಂದು ಆಕ್ಷೇಪಣೆ ದಾಖಲಿಸಿ ನೋಟಿಸು ರದ್ದಾದ ಪ್ರಕರಣಗಳೆಷ್ಟು ? (ಕಳೆದ ೩ ವರ್ಷಗಳ ವಿವರ ನೀಡುವುದು)

## ಕರ್ನಾಟಕ ಸರ್ಕಾರದಲ್ಲಿ ಖಾಲಿ ಇರುವ "ಎ", "ಬಿ", "ಸಿ" ಹಾಗೂ "ಡಿ" ಶ್ರೇಣಿಯ ಹುದ್ದೆಗಳು

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) –**

೯೪ (೭೬೩) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಿನಾಂಕ: ೩೧.೦೧.೨೦೨೫ರ ಅನ್ವಯ ಕರ್ನಾಟಕ ಸರ್ಕಾರದಲ್ಲಿ ಖಾಲಿ ಇರುವ "ಎ", "ಬಿ", "ಸಿ", ಹಾಗೂ "ಡಿ" ಶ್ರೇಣಿಯ ಹುದ್ದೆಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಹೆಚ್ಚಿನ ಸಂಖ್ಯೆಯ ಖಾಲಿ ಹುದ್ದೆಗಳ ಕಾರಣದಿಂದಾಗಿ ಸರ್ಕಾರದ ಹಲವಾರು ಇಲಾಖೆಯ ಕೆಲಸ ಕಾರ್ಯಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಖಾಲಿ ಹುದ್ದೆ ಭರ್ತಿಗೆ ಸರ್ಕಾರ ಕ್ರಮ ಕೈಗೊಳ್ಳುವುದೆ ; ಹಾಗಿದ್ದಲ್ಲಿ, ಸರ್ಕಾರ ಕಾಲಮಿತಿ ಕಾರ್ಯಯೋಜನೆಯನ್ನೇನಾದರೂ ಹೊಂದಿದೆಯೇ ? (ವಿವರ ಒದಗಿಸುವುದು)

## ರಾಜ್ಯದಲ್ಲಿ ಆಶ್ರಯಗೊಂಡಿರುವ ಅಕ್ರಮ ಬಾಂಗ್ಲಾ ನಿವಾಸಿಗಳ ಬಗ್ಗೆ

**ಶ್ರೀ ಪಿ.ಎಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೫ (೮೧೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ವಾರ ರಾಜ್ಯದ ಪ್ರಮುಖ ದಿನಪ್ರತಿಕೆಯೊಂದು ಪ್ರಕಟಿಸಿದಂತೆ ಕರ್ನಾಟಕ ರಾಜ್ಯದ ಐತಿಹಾಸಿಕ ನಗರವಾದ ವಿಜಯಪುರ ಜಿಲ್ಲೆಯಲ್ಲಿ ಕಳೆದ ೨೦ ವರ್ಷಗಳಲ್ಲಿ ೧೫ ಸಾವಿರಕ್ಕೂ ಹೆಚ್ಚು ಬಾಂಗ್ಲಾ ಅಕ್ರಮ ನಿವಾಸಿಗಳು ಆಶ್ರಯ ಪಡೆಯುತ್ತಿರುವ ಮಾಹಿತಿ ಸರ್ಕಾರಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇದು ರಾಜ್ಯ ಹಾಗೂ ದೇಶದ ಆಂತರಿಕ ಭದ್ರತೆಗೆ ಧಕ್ಕೆ ತರುವಂತಹ ಹಾಗೂ ಶಾಂತಿ ಸುವ್ಯವಸ್ಥೆಗೆ ಮಾರಕವಾದಂತಹ ವಿಷಯವಲ್ಲವೇ ;

(ಇ) ಹಾಗಿದ್ದಲ್ಲಿ, ಅಕ್ರಮವಾಗಿ ರಾಜ್ಯದಲ್ಲಿ ಆಶ್ರಯ ಪಡೆದಿರುವ ಬಾಂಗ್ಲಾ ನುಸುಳುಕೋರರನ್ನು ಪತ್ತೆ ಹಚ್ಚಲು ಸರ್ಕಾರ ಹಮ್ಮಿಕೊಂಡ ಕ್ರಮಗಳು ಮತ್ತು ಅವರನ್ನು ಅವರ ದೇಶಕ್ಕೆ ಕಳುಹಿಸಲು ಕೈಗೊಂಡ ಕ್ರಮಗಳು ಯಾವುವು ? (ಮಾಹಿತಿ ಒದಗಿಸುವುದು)

## ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) –**

೯೬ (೮೨೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೊಸ ಪಿಂಚಣಿ ಯೋಜನೆಗೆ (NPS) ಒಳಪಟ್ಟ ನೌಕರರ ಸಂಖ್ಯೆ ಎಷ್ಟು ;

(ಆ) ಹೊಸ ಪಿಂಚಣಿ ಯೋಜನೆಗೆ ಒಳಪಟ್ಟ ಎಷ್ಟು ನೌಕರರು ಇಲ್ಲಿಯವರೆಗೆ ನಿವೃತ್ತರಾಗಿದ್ದಾರೆ ; ಅವರು ಪಡೆಯುತ್ತಿರುವ ಕನಿಷ್ಠ ಮತ್ತು ಗರಿಷ್ಠ ಪಿಂಚಣಿ ಎಷ್ಟು ;

(ಇ) ಹಳೆ ಪಿಂಚಣಿ ಮರು ಜಾರಿಗೆ ಸರ್ಕಾರ ರಚಿಸಿರುವ ಸಮಿತಿಯು ಇಲ್ಲಿಯವರೆಗೆ ಎಷ್ಟು ಸಭೆಗಳನ್ನು ನಡೆಸಿದೆ ; ಎಷ್ಟು ರಾಜ್ಯಗಳಿಗೆ ತೆರಳಿ ಅಧ್ಯಯನ ನಡೆಸಿದೆ ; ಸದರಿ ಸಮಿತಿಗೆ ವರದಿಯನ್ನು ನೀಡಲು ಎಷ್ಟು ಕಾಲಾವಕಾಶ ನೀಡಲಾಗಿದೆ ;

(ಈ) ೨೦೦೬ಕ್ಕಿಂತ ಮೊದಲು ನೇಮಕಾತಿ ಅಧಿಸೂಚನೆ ಹೊರಡಿಸಿ ದಿನಾಂಕ: ೦೧.೦೪.೨೦೦೬ ನಂತರ ನೇಮಕಾತಿ ಹೊಂದಿದ್ದ ನೌಕರರಿಗೆ ಹಳೆ ಪಿಂಚಣಿ ಯೋಜನೆಯನ್ನು ಜಾರಿ ಮಾಡಿರುವಂತೆ ಹೊಸ ಪಿಂಚಣಿ ಯೋಜನೆ ನೌಕರರಿಗೂ ಜಾರಿ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ;

(ಉ) ಶೀಘ್ರವಾಗಿ ಹಳೆ ಪಿಂಚಣಿ ಯೋಜನೆ ಜಾರಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ನವಲಿ ಸಮಾನಾಂತರ ಜಲಾಶಯದ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೯೭ (೭೫೪) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಂಗಭದ್ರ ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯ ಒಟ್ಟು ೩.೭೩ ಘನ ಕಿ.ಮೀ., (೧೩೨ TMC) ಆಗಿದ್ದು, ಜಲಾಶಯದಲ್ಲಿ ೩೦ TMC ಹೂಳು ತುಂಬಿರುವ ಹಿನ್ನೆಲೆಯಲ್ಲಿ ಜಲಾಶಯದ ಸಂಗ್ರಹಣಾ ಸಾಮರ್ಥ್ಯವು ೧೦೦ TMC ಗೆ ಇಳಿದಿರುವುದು ಸರ್ಕಾರಕ್ಕೆ ತಿಳಿದಿದೆಯೇ ;

(ಆ) ಇದ್ದಲ್ಲಿ, ಸದರಿ ಹೂಳನ್ನು ತೆರವು ಮಾಡಲು ಆಗದಿರುವ ಕಾರಣ ನವಲಿ ಬಳಿ ಸಮಾನಾಂತರ ಅಣೆಕಟ್ಟೆಯನ್ನು ನಿರ್ಮಾಣ ಮಾಡುವ ಕ್ರಿಯಾಯೋಜನೆ ಯಾವ ಹಂತದಲ್ಲಿದೆ? (ವಿವರ ಒದಗಿಸುವುದು)

## ಸಾಮಾಜಿಕ ಜಾಲತಾಣದ ನಿರ್ವಹಣೆಯ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೮ (೭೫೨) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾಮಾಜಿಕ ಜಾಲತಾಣದ ಮೇಲೆ ಪೊಲೀಸ್ ಇಲಾಖೆ ಯಾವ ರೀತಿ ನಿಗಾವಹಿಸಿದೆ ; (ವಿವರ ಒದಗಿಸುವುದು)

(ಆ) ಸಾಮಾಜಿಕ ಜಾಲತಾಣವನ್ನು ನಿರ್ವಹಿಸಲು ಸರ್ಕಾರ ಖಾಸಗಿಯವರಿಗೆ ವಹಿಸಲಾಗಿದೆಯೇ ; ವಹಿಸಿದ್ದರೆ, ಯಾವ ಕಂಪನಿಗೆ ವಹಿಸಲಾಗಿದೆ ; (ವಿವರ ಒದಗಿಸುವುದು)

(ಇ) ಸಾಮಾಜಿಕ ಜಾಲತಾಣದ ನಿರ್ವಹಣೆಯನ್ನು ಕಾರ್ಯನಿರ್ವಹಿಸಲು ಸರ್ಕಾರ ಮಾಸಿಕ ಎಷ್ಟು ಹಣ ಭರಿಸುತ್ತಿದೆ ? (ವಿವರ ಒದಗಿಸುವುದು)

## ಏತ ನೀರಾವರಿ ಯೋಜನೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೯ (೮೪೧) ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಹೇರಂಜಾಲು ಗ್ರಾಮದಲ್ಲಿ ಏತ ನೀರಾವರಿ ಕಾಮಗಾರಿಗೆ ಅನುಮೋದನೆ ನೀಡಲಾಗಿದೆಯೇ ; ನೀಡಿದ್ದರೆ, ಕಾಮಗಾರಿ ಯಾವ ಹಂತದಲ್ಲಿದೆ ;

(ಆ) ಯೋಜನೆಗೆ ಟೆಂಡರ್ ಕರೆಯಲಾಗಿತ್ತೇ ; ಟೆಂಡರ್‌ನಲ್ಲಿ ಭಾಗವಹಿಸಿದ್ದ ಸಂಸ್ಥೆಗಳು ನಮೂದಿಸಿದ್ದ ಟೆಂಡರ್ ಮೊತ್ತ ಎಷ್ಟು ; ಯಾವ ಸಂಸ್ಥೆಗೆ/ಗುತ್ತಿಗೆದಾರರಿಗೆ ಟೆಂಡರ್ ನೀಡಲಾಗಿದೆ ; ಅವರು ನಮೂದಿಸಿದ ಟೆಂಡರ್ ಮೊತ್ತವೆಷ್ಟು ;

(ಇ) ಸದರಿ ಕಾಮಗಾರಿ ಅವೈಜ್ಞಾನಿಕವಾಗಿದೆ ಎಂದು ಗ್ರಾಮಸ್ಥರು ಯೋಜನೆಗೆ ವಿರೋಧ ವ್ಯಕ್ತ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಗ್ರಾಮಸ್ಥರ ವಿರೋಧಕ್ಕೆ ಕಾರಣಗಳೇನು ;

(ಈ) ಗ್ರಾಮಸ್ಥರ ವಿರೋಧದ ಹಿನ್ನೆಲೆಯಲ್ಲಿ ಸದರಿ ಯೋಜನೆಯ ಕುರಿತು ಸರ್ಕಾರದ ನಿಲುವೇನು ?

## ಹಾಸನ ಜಿಲ್ಲಾವ್ಯಾಪ್ತಿಯಲ್ಲಿ ಸರ್ಕಾರದ ಇಲಾಖೆಗಳಿಗೆ ಮತ್ತು ನಿಗಮ ಮಂಡಳಿಗಳ ಹಾಗೂ ಹಿಂದುಳಿದ ವರ್ಗಗಳಿಗೆ ಅನುದಾನಗಳ ಆರ್ಥಿಕ ಮತ್ತು ಭೌತಿಕ ಹಂಚಿಕೆಯಲ್ಲಿ ತಾರತಮ್ಯತೆ ಹೊಂದಿರುವ ಬಗ್ಗೆ

**ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೦ (೯೩೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷಗಳಲ್ಲಿ ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಸರ್ಕಾರದ ಇಲಾಖೆಗಳಿಗೆ ಮತ್ತು ನಿಗಮ ಮಂಡಳಿಗಳಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹಾಗೂ ಹಿಂದುಳಿದ ವರ್ಗಗಳಿಗೆ ಹಂಚಿಕೆ ಮಾಡಿ ಬಿಡುಗಡೆ ಮಾಡಿರುವ ಕ್ಷೇತ್ರವಾರು ಅನುದಾನ ಎಷ್ಟು ; ಈ ನಿಗದಿತ ಅನುದಾನದಲ್ಲಿ ನಿಗದಿಪಡಿಸಿರುವ ಆರ್ಥಿಕ ಮತ್ತು ಭೌತಿಕ ಗುರಿ ಎಷ್ಟು ; (ವಾರ್ಷಿಕವಾರು ವಿವರ ನೀಡುವುದು)

(ಆ) ಕಳೆದ ೫ ವರ್ಷಗಳಲ್ಲಿ ಸರ್ಕಾರದ ಇಲಾಖೆಗಳಿಗೆ ಮತು ನಿಗಮ ಮಂಡಳಿಗಳಿಗೆ ನಿಗದಿಪಡಿಸಿರುವ ಕ್ಷೇತ್ರವಾರು ಆರ್ಥಿಕ ಮತ್ತು ಭೌತಿಕ ಗುರಿಗಳು ಎಷ್ಟು ; ಈ ರೀತಿ ನಿಗದಿಪಡಿಸಿದ ಗುರಿಗಳಲ್ಲಿ ಕ್ಷೇತ್ರವಾರು ಗುರಿ ಸಾಧನೆ ಕುಂಠಿತವಾಗಲು ಕಾರಣವೇನು ; (ಸಂಪೂರ್ಣ ವಿವರ ನೀಡುವುದು)

(ಇ) ತಾಲ್ಲೂಕು ಮಟ್ಟದಲ್ಲಿ ಸರ್ಕಾರದ ಇಲಾಖೆಗಳು ಮತ್ತು ನಿಗಮ ಮಂಡಳಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಹಾಗೂ ಹಿಂದುಳಿದ ವರ್ಗಗಳಿಗೆ, ಸ್ಥಳೀಯ ಶಾಸಕರು ಫಲಾನುಭವಿಗಳನ್ನು ಆಯ್ಕೆ ಮಾಡಲು ಸರ್ಕಾರದಿಂದ ಕಳೆದ ಎರಡು ವರ್ಷಗಳಲ್ಲಿ ಅತೀ ಕಡಿಮೆ ಆರ್ಥಿಕ ಮತ್ತು ಭೌತಿಕ ಗುರಿ ನಿಗದಿಪಡಿಸಿರುವುದರಿಂದ ಕ್ಷೇತ್ರ ಮಟ್ಟದಲ್ಲಿ ಸಂಬಂಧಪಟ್ಟ ವರ್ಗದ ಫಲಾನುಭವಿಗಳ ಅಭಿವೃದ್ಧಿಗೆ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ತಾರತಮ್ಯತೆಯನ್ನು ಸರಿದೂಗಿಸಲು ಸರ್ಕಾರ ಹೆಚ್ಚಿನ ಅನುದಾನವನ್ನು ಒದಗಿಸಲು ಕ್ರಮ ಕೈಗೊಳ್ಳುವುದೇ ? (ಪೂರ್ಣ ವಿವರ ನೀಡುವುದು)

## ಜೈಲುಗಳ ಒಳಗಿನಿಂದಲೇ ಕೈದಿಗಳು ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿರುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು)** –

೧೦೧ (೭೪೭) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ಕಾರಾಗೃಹದಲ್ಲಿರುವ ಹಲವಾರು ವಿಚಾರಣಾಧೀನ ಕೈದಿಗಳು ಹಾಗೂ ಸಜಾ ಬಂಧಿಗಳು ಜೈಲು ಒಳಗಿನಿಂದಲೇ ಅವಿರತವಾಗಿ ಅಕ್ರಮ ಚಟುವಟಿಕೆಗಳನ್ನು ನಡೆಸುತ್ತಾ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಆರೋಪಿಗಳು ಹಾಗೂ ರೌಡಿಗಳ ಜೊತೆಗೆ ಕೈದಿಗಳು ನಿರಂತರ ಸಂಪರ್ಕದಲ್ಲಿದ್ದುಕೊಂಡು ಅಪರಾಧ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದು, ಇದನ್ನು ತಡೆಯಲು ಸರ್ಕಾರ ಇದುವರೆಗೆ ಯಾವುದೇ ಕಠಿಣ ಕ್ರಮಗಳನ್ನು ಕೈಗೊಳ್ಳಲು ವಿಫಲವಾಗಿರುವುದಕ್ಕೆ ಕಾರಣಗಳೇನು ;

(ಇ) ಮೊಬೈಲ್ ಫೋನ್‌ಗಳನ್ನು ಅಕ್ರಮವಾಗಿ ಬಳಸಿ ಜೈಲಿನಿಂದಲೇ ಹಣಕ್ಕಾಗಿ ಬೇಡಿಕೆ ಹಾಕುತ್ತಿರುವುದು, ಕೊಲೆ ಬೆದರಿಕೆ ಹಾಗೂ ಡ್ರಗ್ಸ್ ಮಾರಾಟಕ್ಕೆ

ಸಂಚು ರೂಪಿಸುವುದರ ಜೊತೆಗೆ ಎಲ್ಲಾ ರೀತಿಯ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸುತ್ತಿರುವುದನ್ನು ತಡೆಯಲು ಸರ್ಕಾರ ಯಾವ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು ?

## ಮಲ್ಲಯ್ಯಮುತ್ಯ ಕರೆ ಅಭಿವೃದ್ಧಿ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೨ (೭೭೩) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾಳಗಿ ತಾಲ್ಲೂಕಿನ ಕಮಕನೂರ ಗ್ರಾಮದ ಮಲ್ಲಯ್ಯಮುತ್ಯ ಕೆರೆಯ ಅಭಿವೃದ್ಧಿಗೆ ಕರ್ನಾಟಕ ನೀರಾವರಿ ನಿಗಮದವರು ಇದುವರೆಗೆ ಕೈಗೊಂಡಿರುವ ಅಭಿವೃದ್ಧಿ ಕಾರ್ಯಕ್ಕೆ ಎಷ್ಟು ಮೊತ್ತ ವ್ಯಯಿಸಲಾಗಿದೆ ; ಯಾವ ಯಾವ ಅಭಿವೃದ್ಧಿ ಕಾರ್ಯಕ್ಕೆ ಎಷ್ಟು ಮೊತ್ತ ವ್ಯಯಿಸಲಾಗಿದೆ ; (ಮಾಹಿತಿ ಒದಗಿಸುವುದು)

(ಆ) ಮೈಸೂರು ಮಹಾರಾಜರ ಕಾಲದಲ್ಲಿ ಸಮರ್ಪಕವಾಗಿ ಅಭಿವೃದ್ಧಿಪಡಿಸಿದ್ದ ಈ ಪುರಾತನ ಕಾಲದ ಕೆರೆ ಮತ್ತು ಕೆರೆಯ ಸುತ್ತಮುತ್ತಲಿನ ಪ್ರದೇಶ ಹತ್ತು ಹಲವಾರು ವೈಶಿಷ್ಟ್ಯಗಳಿಂದ ಕೂಡಿದ್ದು, ಪಕ್ಕದ ಗುಡ್ಡದ ಮೇಲೆ ಅತ್ಯಂತ ಪುರಾತನ ೭ ಲಿಂಗಗಳೂ, ದೇವಸ್ಥಾನ ಇಂದಿಗೂ ಜನರನ್ನು ಆಕರ್ಷಿಸುತ್ತಿದ್ದು, ಈ ಕೆರೆ ನೀರಿಲ್ಲದೆ ಬತ್ತಿ ಹೋಗಿರುವುದರಿಂದ ಅನೇಕ ಗ್ರಾಮಗಳು ಬರಕ್ಕೆ ತುತ್ತಾಗಿರುವುದು ನಿಜವೇ ;

(ಇ) ಬೆಣ್ಣೆತೋರಾ ಹಿನ್ನೀರಿನಿಂದ ಈ ಕೆರೆ ತುಂಬಿಸಲು ಕರ್ನಾಟಕ ನೀರಾವರಿ ನಿಗಮದ ಮೂಲಕ ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡಿರುವ ಮತ್ತು ಸರ್ಕಾರದ ಮುಂದಿರುವ ಕಾರ್ಯಕ್ರಮಗಳೇನು ?

## ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೌಲ್ಯಮಾಪನ ಮತ್ತು ನಿರ್ವಹಣೆ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೩ (೭೮೯) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೌಲ್ಯಮಾಪನ ಮತ್ತು ನಿರ್ವಹಣೆಯನ್ನು ಯಾರು ಮಾಡುತ್ತಿದ್ದಾರೆ ;

(ಆ) ಕಳೆದ ಎರಡು ವರ್ಷಗಳಿಂದ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೌಲ್ಯಮಾಪನ ಮತ್ತು ನಿರ್ವಹಣೆಯನ್ನು ಮಾಡಲು ಟೆಂಡರ್ ಕರೆಯಲಾಗಿತ್ತೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಟೆಂಡರ್ ಕರೆಯದೇ ಇದ್ದಲ್ಲಿ, ಖಾಸಗಿ ಸಂಸ್ಥೆಯು ನೀಡಿದ್ದ ಪ್ರಸ್ತಾವನೆಯನ್ನು ಒಪ್ಪಿಕೊಂಡು ಕಾರ್ಯಾದೇಶ ನೀಡಲು ಕಾರಣಗಳೇನು ;

(ಈ) ಸದರಿ ಸಂಸ್ಥೆಗೆ ಕಳೆದ ಎರಡು ವರ್ಷಗಳಿಂದ ಪಾವತಿ ಮಾಡಿರುವ ಮೊತ್ತ ಎಷ್ಟು ? (ಸಂಪೂರ್ಣ ವಿವರ ನೀಡುವುದು)

## ನೋಟರಿ ನೇಮಕಾತಿಯಲ್ಲಿ ಮೀಸಲಾತಿ ಕಲ್ಪಿಸುವ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೪ (೭೫೫) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ನೋಂದಾಯಿತ ನೋಟರಿಗಳ ಸಂಖ್ಯೆ ಎಷ್ಟು ; ಯಾವ ದಿನಾಂಕದಿಂದ ಕಾರ್ಯನಿರ್ವಹಿಸುತ್ತಿವೆ; (ಪ್ರವರ್ಗವಾರು ಹಾಗೂ ಜಿಲ್ಲಾವಾರು/ತಾಲ್ಲೂಕುವಾರು ವಿವರ ನೀಡುವುದು)

(ಆ) ನೋಟರಿಗಾಗಿ ನೋಂದಾಯಿಸಲು ಇರುವ ನಿಯಮಗಳೇನು ಹಾಗೂ ನೋಂದಾಯಿಸಿದ ನೋಟರಿ ಅವಧಿ ಎಷ್ಟು ;

(ಇ) ಸದರಿ ನಿಯಮಗಳಲ್ಲಿ ಪ್ರವರ್ಗವಾರು ಹಾಗೂ ಜಿಲ್ಲಾವಾರು ಮೀಸಲಾತಿ ಕಲ್ಪಿಸಲಾಗಿದೆಯೇ; ಕಲ್ಪಿಸದಿದ್ದಲ್ಲಿ ನೇಮಕಾತಿಯಲ್ಲಿ ದಲಿತರು, ಹಿಂದುಳಿದ ವರ್ಗದವರು ಹಾಗೂ ಅಲ್ಪಸಂಖ್ಯಾತರ ಅಭ್ಯರ್ಥಿಗಳು ಸಾಮಾಜಿಕ ನ್ಯಾಯದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬಂದಿದ್ದಲ್ಲಿ, ನೋಟರಿ ನೋಂದಾಯಿಸುವ ನಿಯಮಗಳಲ್ಲಿ ದಲಿತರು, ಹಿಂದುಳಿದ ವರ್ಗದವರು ಹಾಗೂ ಅಲ್ಪಸಂಖ್ಯಾತರುಗಳ ಅಭ್ಯರ್ಥಿಗಳಿಗೆ ಮೀಸಲಾತಿ ಕಲ್ಪಿಸಲು ಸರ್ಕಾರ ಕ್ರಮಕೈಗೊಳ್ಳುವುದೇ ? (ವಿವರ ನೀಡುವುದು)

## ರಾಜ್ಯದಲ್ಲಿ ಪರಿಶಿಷ್ಟ ಪಂಗಡಗಳ ಕಾಲೋನಿ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನದ ಬಗ್ಗೆ

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) –**

೧೦೫ (೮೩೨) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೪–೨೦೨೫ನೇ ಸಾಲಿನಲ್ಲಿ ರಾಜ್ಯದಲ್ಲಿ ಪರಿಶಿಷ್ಟ ಪಂಗಡಗಳ ಕಾಲೋನಿಗಳ ಅಭಿವೃದ್ಧಿಗಾಗಿ ಬಿಡುಗಡೆಯಾದ ಅನುದಾನ ಎಷ್ಟು ;

(ಆ) ಸದರಿ ಅನುದಾನದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು ;

(ಇ) ರಾಜ್ಯದಲ್ಲಿ ಪರಿಶಿಷ್ಟ ಪಂಗಡದ ಅನೇಕ ಹಳ್ಳಿಗಳನ್ನು ಅಭಿವೃದ್ಧಿಪಡಿಸದೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಇತರೆ ಇಲಾಖೆಗಳಲ್ಲಿ ವಿನಿಯೋಗಿಸುತ್ತಿರುವುದಕ್ಕೆ ಕಾರಣಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ–877, 600 ಪ್ರತಿಗಳು (ಪಿ6)

**List of Questions for Oral Answers**

**Total No. of Questions - 15**

# LIST - 7

# KARNATAKA LEGISLATIVE COUNCIL

## ONE HUNDRED AND FIFTY FIFTH SESSION

## Thursday, the 13th March, 2025

---

### GROUP - IV

1. Chief Minister
2. Deputy Chief Minister
3. Minister for Home
4. Minister for Law, Parliamentary Affairs and Legislation and Tourism
5. Minister for Excise
6. Minister for Minor Irrigation, Science and Technology.

---

### ERRORS IN KHAJANE-2 OF THE STATE

**Sri D.S. Arun (Local Authorities Constituency) -**

91 (852) Will the Chief Minister be pleased to state :-

a) the amount that has been provided by the Treasury Department for public/employees and other persons at free of cost after installation of Khajane-2 software in the State ; (details be furnished)

b) the number of cases in which the amount that have been paid for eligible beneficiaries for two-three times instead of one time payment ; (details be furnished)

c) whether the amount has been paid for beneficiaries who are not eligible ; (details be furnished)

d) the amount that has not been recovered in such cases ; (details be furnished)

e) the Department for which the instruction has been given by the Finance Department to the Treasury Department to pass the contingency bills without sub-vouchers against the financial rules ; and the amount of the bills that have been passed ? (details be furnished)

**PUBS IN BENGALURU CITY**

**Sri H.S. Gopinath (Local Authorities Constituency) -**

92 (851) Will the Deputy Chief Minister be pleased to state:-

a) the prevailing criterias to commence the pubs in Bengaluru city; the number of pubs which are operating by getting licence in Bengaluru city ; the manner in which the action has been taken by the Government against the owners who are operating the pubs illegally ; (complete information along with pubs be furnished)

b) the reason for not taking any stringent action by the Police Department and Bruhat Bengaluru Mahanagar Palike eventhough pubs are operating illegally ; (complete information be furnished)

c) whether the timings has been prescribed by the Government for opening and closing of the pubs ; if not, the action that is being taken by the Government against the owners who are operating overtime ;

d) the Home Department has informed the Bruhat Bengaluru Mahanagara Palike that the law and order in the city is being collapsed due to the pubs operating overtime, whether these both Departments would come forward to take up the stringent action against the pubs which are operating overtime ? (complete information be furnished)

**POLICE SYSTEM OF KARNATAKA STATE**

**Sri Manjunatha Bhandari (Local Authorities Constituency) -**

93 (835) Will the Minister for Home be pleased to state:-

a) in the changing scenario of the State, complexity of the criminal activities are increasing, in this view, the required population police ratio that has been prescribed by the Government to provide the safety and the law and order ; whether the proposal is before the Government for increasing of police personnel ;

b) whether the situation is being arised for the police personnel working without rest and more than 8 hours at present ; whether the duty rotation has been carried out in the Department ; (the details alongwith statistics of duty points, number of personnel and the personnel who are doing double duty be furnished)

c) whether there are guidelines with body worn camera during the inspection of private vehicles to traffic police officers in the State ; the step taken by the Government with regard to the hardship causing for travelling by the police officers by inspecting the vehicles in the places which are dangerous with narrow roads and excess vehicles in most of the cases ;

d) whether it has come to the notice of the Government that the spot inspection is being conducted by the police in the pretext of verification eventhough there is a circular that the police should not intervene in the civic land related cases ;

e) the reason for the penalty notice has been issued by the Police Department for the owners of vehicles who have not violated the traffic rules and who have not gone to the places referred in the notice ; the number of cases in which the notice have been cancelled by submitting objection that the vehicles which have violated the rules in Dakshina Kannada and Udupi districts have not belong to them ? (the details for the last 3 years be furnished)

### REGARDING VACANT POSTS

**Sri H.P. Sudham Das (Nominated) -**

94 (763) Will the Chief Minister be pleased to state:-

a) the number of A.B.C and D cadre posts which are lying vacant in the Government of Karnataka as on 31.01.2025 ; (details be furnished)

b) whether it has come to the notice of the Government that the works of various Departments of the Government have slowed down due to more number of posts are lying vacant ; if so, the steps would be taken by the Government to fill up the vacant posts; if so, whether the Government has any time frame work plan ? (details be furnished)

### BANGLA ILLEGAL IMMIGRANTS IN THE STATE

**Sri P.H. Pujar (Local Authorities Constituency) -**

95 (814) Will the Chief Minister be pleased to state:-

a) whether the information has come to the notice of the Government that more than 15,000 Bangla illegal immigrants are residing during the last 20 years in Vijayapur District which is the historical city of the Karnataka State as published by major newspaper of the State last week ;

b) if so, whether it is a matter which will cause damage to the internal security of the State and the Country and harmful to law and order ;

c) if so, the measures chalked out by the Government to detect the Bangla immigrants who are residing in the State and the particulars of steps taken by the Government to send them back to their country ? (information be furnished)

**REGARDING NEW PENSION SCHEME (NPS)**

**Sri Ramojigowda (Graduates' Constituency) -**

96 (828) Will the Chief Minister be pleased to state:-

a) the number of employees who are coming under New Pension Scheme (NPS) ;

b) the number of employees who are coming under New Pension Scheme have been retired till date ; the minimum and maximum pension that they are receiving ;

c) the number of meetings that have been conducted by the committee constituted by the Government for restoration of old pension ; the number of States for which committee has been visited and the study has been conducted, the timelimit that has been provided to submit the report by the said committee ;

d) the old pension scheme for employees who have been appointed after 01.04.2006 by issuing recruitment notification prior 2006 has been restored, whether the plan is before the Government that the same would be considered for the employees of New Pension Scheme ;

e) the step taken by the Government to restore Old Pension Scheme immediately ?

**NAVALI BALANCING RESERVOIR**

**Sri Basanagouda Badarli (Elected by Legislative Assembly) -**

97 (754) Will the Deputy Chief Minister be pleased to state:-

a) the total water storage capacity of Tungabhadra reservoir is 3.73 cubic k.m (132 TMC), whether the Government has noticed that the water storage capacity has been decreased to 100 TMC in view of 30 TMC silt has been filled in the reservoir ;

b) if so, the present stage of action plan to construct the balancing reservoir near Navali as the desiltation would not been carried out ? (details be furnished)

**MONITORING OF SOCIAL MEDIA**

**Sri K.S. Naveen (Local Authorities Constituency)** -

98 (752) Will the Minister for Home be pleased to state:-

a) the manner in which the Police Department is keeping surveillance on social media ; (details be furnished)

b) whether the Government has been entrusted to private company for monitoring of social media ; if so, the details of company for which it has been entrusted ; (details be furnished)

c) the amount that is borne by the Government for the monitoring of the social media ? (details be furnished)

**LIFT IRRIGATION PROJECT**

**Sri Kishor Kumar Puttur(Local Authorities Constituency) -**

99 (841) Will the Minister for Minor Irrigation, Science and Technology be pleased to state:-

a) whether the approval has been accorded for lift irrigation work in Heranjalu village of Bynduru taluk of Udupi district ; if so, the present stage of the same ;

b) whether the tender has been invited for the same ; the tender amount that has been quoted by the firms which have been participated in the tender ; the particular of firm/contractors to whom the tender has been awarded ; the tender amount quoted by them ;

c) whether it has come to the notice of the Government that the villagers have opposed to the project by stating that the said work is unscientific; the reasons for the opposition of the villagers ;

d) the stand of the Government with regard to the said project in view of opposition of villagers ?

**DISPARITY IN ALLOCATION OF GRANTS**

**Sri Suraj Revanna (Local Authorities Constituency) -**

100 (937) Will the Chief Minister be pleased to state:-

a) the constituencywise grant that has been released by allocating for the Government Departments and Corporation Boards for scheduled castes, scheduled tribes and backward classes in the limit of Hassan district during the last 5 years ; the financial and physical target that has been fixed in this prescribed grant ; (yearwise details be furnished)

b) the constituencywise financial and physical target that has been fixed for the Government Departments and Corporation Boards during the last 5 years ; out of the target that has been fixed in this manner, the reason for slow down in the achievement of constituencywise target ; (complete details be furnished)

c) since the lowest financial and physical target has been fixed by the Government during the last 2 years to select the beneficiaries of scheduled castes, scheduled tribes and backward classes by the local Member of Legislative Assembly for the Government Departments and Corporation Boards in the taluk level, whether it has come to the notice of the Government that the development of beneficiaries of concerned category in the constituency level has been slowed down ; if so, whether the step would be taken to provide more grant by the Government to meet this disparity ? (complete details be furnished)

**PRISONERS INVOLVING IN ILLEGAL ACTIVITIES**

**Sri Prathap Simha Nayak K. (Elected by Legislative Assembly) -**

101 (747) Will the Minister for Home be pleased to state:-

a) whether it has come to the notice of Government that the illegal activities are being carried out continuously from inside the prison by several under trial prisoners and convicted prisoners who are detained in the various prisons of the State ;

b) if so, the prisoners are involving in the crime activities in constant contact with accused person and rowdies, the reasons for the failure of the Government to take any stringent actions to prevent the same till date ;

c) the necessary steps that would be taken by the Government to prevent all kinds of illegal activities including the demanding for money, threatening of murder and sketching the plan for drug activities from the prison by using mobile phones illegally ?

## DEVELOPMENT OF MALLAYYAMUTYA LAKE

**Sri Thippanappa Kamaknoor (Elected by Legislative Assembly) -**

102 (773) Will the Deputy Chief Minister be pleased to state:-

a) the amount that has been spent for the developmental work which has been undertaken by the Karnataka Neeravari Nigama Limited for the development of Mallayyamutya Lake in Kamaknoor Village of Kalagi taluk; the particulars of developmental work for which the amount has been spent ; (information be furnished)

b) this ancient lake and its surrounding area has various distinctive features which have been developed properly during the period of Maharaja of Mysore, there are ancient 7 lingas and temple on the adjacent hill is attracting the people even today, whether it is true that many villages are affected by drought due to this Lake has been dried up without water ;

c) the steps taken by the Government to develop this lake through the Karnataka Neeravari Nigama Limited and to fill the same from Bennithora backwater and the programmes that are before the Government ?

## EVALUATION AND MONITORING OF IMPLEMENTATION OF GUARANTEE SCHEMES

**Sri Sharavana T.A. (Elected by Legislative Assembly) -**

103 (789) Will the Chief Minister be pleased to state:-

a) the particulars of the authority who are evaluating and monitoring the implementation of guarantee schemes ;

b) whether the tender has been invited to evaluate and monitor the implementation of guarantee schemes of the Government during the last 2 years ; (complete information be furnished)

c) if not, the reasons for issuance of work order by accepting the proposal that has been provided by the private firm ;

d) the amount that has been paid to the said firm during the last 2 years ? (complete details be furnished)

**RESERVATION IN APPOINTMENT AS NOTARY**

**Smt. Balkhees Banu (Elected by Legislative Assembly) -**

104 (755) Will the Minister for Law, Parliamentary Affairs and Legislation and Tourism be pleased to state:-

a) the total number of registered Notaries in the State ; the date from which these are functioning ; (categorywise and districtwise/talukwise details be furnished)

b) the prevailing rules to registering as Notary and the duration for the same ;

c) whether categorywise and districtwise reservation has been provided in the said rules ; if not, whether it has come to the notice of the Government that the candidates of Dalits, Backward Classes and Minorities are being deprived from the social justice in the appointment ;

d) if so, whether the step would be taken by the Government to provide the reservation in the rules for the candidates of Dalits, Backward Classes and Minorities for registering as Notary ? (details be furnished)

## GRANT RELEASED TO DEVELOPMENT OF SCHEDULED TRIBES COLONY IN THE STATE

**Sri Shantharama Budna Siddi (Nominated) -**

105 (832) Will the Chief Minister be pleased to state:-

a) the grant that has been released for the development of Scheduled Tribes colonies in the State during the year 2024-2025 ;

b) out of the said grant, the particulars of works which have been taken up in Uttara Kannada District ; (talukwise information be furnished)

c) the reasons for the SCSP/TSP grant being utilised to other Departments without improvement of various villages of scheduled tribes in the State ? (complete information be furnished)

**K.R. MAHALAKSHMI**
Secretary
Karnataka Legislative Council

Govt. Press, Vikasa Soudha Unit, Bengaluru, WD-877/P5